**<u>ಪಿ.ಡಬ್ಲ್ಯೂಃ1</u>**

**<u>ದಿಃ 25-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಪಿರ್ಯಾದಿ ಪರ ಶ್ರೀ. ಕೆ ಜಿ ಎಸ್ ವಕೀಲರಿಂದಃ</u>**

ಪಿರ್ಯಾದಿ ಪರ ವಕೀಲರು ಸಂಜ್ಞೆಗೂ ಮುಂಚೆ ಪಿರ್ಯಾದಿ ಸಲ್ಲಿಸಿದ ಸ್ವಪ್ರಮಾಣೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಸ್ವಪ್ರಮಾಣೀಕ್ರತ ಹೇಳಿಕೆಯನ್ನು ಪಿರ್ಯಾದಿಯ ಮುಖ್ಯ ವಿಚಾರಣಾ ಪ್ರತಿಜ್ಞಾ ಲೇಖಾ ಎಂದು ಪರಿಗಣಿಸಲು ಮನವಿ ಸಲ್ಲಿಸಿದ್ದು ಪರಿಶೀಲಿಸಿ, ಮನವಿಯನ್ನು ಪುರಸ್ಕರಿಸಿ ಪಿರ್ಯಾದಿ ಈ ಮುಂಚೆ ಸಲ್ಲಿಸಿದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಸಾಕ್ಷಿ ಮುಖ್ಯ ವಿಚಾರಣಾ ಪ್ರತಿಜ್ಞಾ ಲೇಖಾ ಎಂದು ಪರಿಗಣಿಸಲಾಯಿತು.

ಆರೋಪಿಯು ನೀಡಿದ ಚೆಕ್ಕನ್ನು ನಿಪಿ. 1 ಎಂದು, ಆರೋಪಿಯ ಸಹಿಯನ್ನು ನಿಪಿ. 1(ಎ) ಎಂದು, ಬ್ಯಾಂಕ್ ಹಿಂಬರಹವನ್ನು ನಿಪಿ. 2 ಎಂದು, ಆರೋಪಿಗೆ ಕಳುಹಿಸಿದ ನೋಟೀಸಿನ ಕಚೇರಿ ಪ್ರತಿಯನು ನಿಪಿ.3 ಎಂದು, ಅಂಚೆ ರಸೀದಿಯನ್ನು ನಿಪಿ. 4 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ.5 ಎಂದು, ಆರೋಪಿಯು ನೀಡಿದ ಮರು ಉತ್ತರದ ನೋಟೀಸನ್ನು ನಿಪಿ.6 ಎಂದು, ದೂರನ್ನು ನಿಪಿ.7 ಎಂದು ಗುರುತಿಸಲಾಯಿತು.

ಪಿರ್ಯಾದಿಯ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ತಿಳಿಸಿರುತ್ತಾರೆ.

ಆರೋಪಿ ಪರ ವಕೀಲರು ಕಲಂ 145(2) ಎನ್ ಐ ಆ್ಯಕ್ಟ್ ರಡಿ ಅರ್ಜಿಯನ್ನು ಸಲ್ಲಿಸಿ ಪಾಟೀ ಸವಾಲಿಗೇ ಸಮಯ ಕೋರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.